# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹೊಳಲ್ಕೆರೆ

*ಸಿ. ಸಿ . ನಂಃ 1455/2022*

ಫಿರ್ಯಾದಿದಾರಃ ಸರ್ಕಾರದ ಪರವಾಗಿ – ಚಿಕ್ಕಜಾಜೂರು ಪೋಲೀಸ್ ಠಾಣೆ.

–ವಿರುದ್ದ–

ಆರೋಪಿತರುಃ 1. ಸಚಿನ್ ಎ. ಬಿನ್ ಲೇಟ್ ಅಣ್ಣಪ್ಪನಾಯ್ಕ ಮತ್ತು ಇನ್ನೊಬ್ಬರು ,

**- ದೋಷಾರೋಪಣೆ -**

ಶ್ರೀ ಉಮೇಶ ಎಂ.ಪಿ, ಬಿ.ಎ.ಎಲ್., ಎಲ್ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ಹೊಳಲ್ಕೆರೆ ಆದ ನಾನು

ಆರೋಪಿತರು :

1. ಸಚಿನ್ ಎ. ಬಿನ್ ಲೇಟ್ ಅಣ್ಣಪ್ಪನಾಯ್ಕ
   ವಯಸ್ಸುಃ 22 ವರ್ಷಗಳು,ವೃತ್ತಿಃ ಬೈಕ್ ಪಾಲಿಷ್ ಕೆಲಸ,
   ವಾಸಃ ನಾಗರಕಟ್ಟೆ ಗ್ರಾಮ , ಕಾಡಜ್ಜಿ ಅಂಚೆ,
   ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.
2. ಜೀವನ್ ಸಿ. ಬಿನ್ ಚಂದ್ರನಾಯ್ಕ
   ವಯಸ್ಸುಃ 19 ವರ್ಷಗಳು,ವೃತ್ತಿಃ ಬೈಕ್ ಪಾಲಿಷ್ ಕೆಲಸ,
   ವಾಸಃ ನಾಗರಕಟ್ಟೆ ಗ್ರಾಮ , ಕಾಡಜ್ಜಿ ಅಂಚೆ,
   ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿಃ 23–11–2021 ರಂದು ಬೆಳಗಿನಜಾವ 12–30 ರಿಂದ 1–00 ರ ಸಮಯದಲ್ಲಿ ಆರೋಪಿತರಾದ ನೀವು ಹೊಳಲ್ಕೆರೆ ತಾಲ್ಲೂಕು ಗ್ಯಾರೇಹಳ್ಳಿ ಗ್ರಾಮದ ಚಾಸಾ–1 ಮತ್ತು ಚಾಸಾ–2 ರವರ ಮನೆಯ ಬಾಗಿಲಿನ ಬೀಗವನ್ನು ಮುರಿದು, ಕಳ್ಳತನ ಮಾಡುವ ಉದ್ದೇಶದಿಂದ ಚಾಸಾ–1 ಮತ್ತು ಚಾಸಾ–2

ರವರ ಮನೆಯ ಒಳಗೆ ಅಕ್ರಮ ಪ್ರವೇಶ ಮಾಡಿರುತ್ತೀರಾ. ಈ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾಂ. ದಂ.ಸಂ. ಕಲಂ 457 ರಡಿಯಲ್ಲಿ ಶಿಕ್ಷಾರ್ಹ ವಾದ ಅಪರಾಧ ಮಾಡಿರುತ್ತೀರಾ ಎಂದು ಆಪಾದಿಸಲಾಗಿರುತ್ತದೆ.

ಮೇಲೆ ಹೇಳಿದ ಅದೇ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಕಳ್ಳತನ ಮಾಡುವ ಉದ್ದೇಶದಿಂದ ಚಾಸಾ-1 ಮತ್ತು ಚಾಸಾ-2 ರವರ ಮನೆಯ ಒಳಗೆ ಅಕ್ರಮ ಪ್ರವೇಶ ಮಾಡಿ ಬೀರುವಿನಲ್ಲಿಟ್ಟಿದ್ದ (1) ಬಿಳಿ ಹರಳಿರುವ ಒಂದು ಜೊತೆ ಬಂಗಾರದ ಹ್ಯಾಂಗಿಂಗ್ಸ್ ತೂಕ 7.07 ಗ್ರಾಮ್, (2) ಒಂದು ಜೊತೆ ಹ್ಯಾಂಗಿಂಗ್ಸ್ ತೂಕ 5.03 ಗ್ರಾಮ್, (3) ಒಂದು ಬಿಳಿ ಹರಳಿನ ಉಂಗುರ ತೂಕ 4.20 ಗ್ರಾಮ್, (4) ಒಂದು ಜೊತೆ ಬಂಗಾರದ ಮಾಟೀಲು ತೂಕ 3.02 ಗ್ರಾಮ್, (5) ಒಂದು ಜೊತೆ ಕಿವಿಯ ಬಂಗಾರದ ಗೋಲು ತೂಕ 1.97 ಗ್ರಾಮ್, (6) ಒಂದು ಜೊತೆ ಬಂಗಾರದ ಓಲೆ ಮತ್ತು ಜುಮುಕಿ ತೂಕ 4.24 ಗ್ರಾಮ್, (7) ಒಂದು ಬಿಳಿ ಹರಳಿನ ಬಂಗಾರದ ಉಂಗುರ ತೂಕ 2.57 ಗ್ರಾಮ್ ಹಾಗೂ ರೂ.1,00,000/- ನಗದು ಹಣವನ್ನು ಕಳ್ಳತನ ಮಾಡಿರುತ್ತೀರಾ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾಂ. ದಂ.ಸಂ. ಕಲಂ 380 ರಡಿಯಲ್ಲಿ ಶಿಕ್ಷಾರ್ಹ ವಾದ ಅಪರಾಧ ಮಾಡಿರುತ್ತೀರಾ ಎಂದು ಆಪಾದಿಸಲಾಗಿರುತ್ತದೆ.

ಈ ಮೇಲೆ ಹೇಳಿದ ಆರೋಪಗಳ ಬಗ್ಗೆ ನೀವು ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಹೊಳಲ್ಕೆರೆ.

**ದಿಃ06-01-2025**